**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.5122/2021 ಸಿಡಬ್ಲ್ಯು -1**

| | |
|---|---|
| **ಸಾಕ್ಷಿದಾರರ ಹೆಸರು** | **ಬಿ.ದಮೋದಾರ ರೆಡ್ಡಿ.** |
| **ತಂದೆಯ ಹೆಸರು** | **ಬಿ.ಗಂಗಿರೆಡ್ಡಿ.** |
| **ವಯಸ್ಸು** | **44 ವರ್ಷ** |
| **ಉದ್ಯೋಗ** | **ಸಿವಿಲ್ ಕಂಟ್ರಾಕ್ಟರ್** |
| **ವಾಸ** | **ವಸಂತಪುರ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **16.07.2026** |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆ:**

ನಾನು ಖಾಸಗಿ ಕಂಪನಿ ಜಯನಗರದಲ್ಲಿ ಕೆಲಸ ಮಾಡುತ್ತಿದ್ದಾಗ, ಈ ಪ್ರಕರಣದ ದೂರುದಾರರಾದ ಏಡುಕೊಂಡಲೂ ನಕ್ಕ ರವರು ಸಹ ಒಂದು ಬಾಷ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಆಗ ನನಗೆ ಸುಮಾರು 15 ವರ್ಷಗಳಿಂದ ದೂರುದಾರರು ಪರಿಚಯವಾಗಿರುತ್ತಾರೆ. ನಾನು ಮತ್ತು ಅವರು ಒಂದೇ ರೂಮಿನಲ್ಲಿ ವಾಸ ಮಾಡುತ್ತಿದ್ದೇವು. ದೂರುದಾರರು ಬಾಷ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ಸಹೋದ್ಯೋಗಿಯಾದ 8 ಮತ್ತು 9 ಆರೋಪಿತರಾದ ಮಂಜುನಾಥ ಮತ್ತು ಮೃದುಲ್ ರವರು ನಾವು ಸಿಂಗಸಂದ್ರ ಗ್ರಾಮದಲ್ಲಿ ಅಪಾರ್ಟ್ ಮೆಂಟ್ ಕನ್ ಸ್ಟ್ರಕ್ಷನ್ ಮಾಡುತ್ತಿದ್ದೇವೆ, ನೀವು ಆಸಕ್ತಿ ಇದ್ದಾರೆ ಸದರಿ ಅಪಾರ್ಟ್ ಮೆಂಟ್ ಗಳನ್ನು ಖರೀದಿ ಮಾಡಬಹುದು ಎಂದು ಹೇಳಿರುತ್ತಾರೆ. 8 ಮತ್ತು 9 ಆರೋಪಿತರು ಒಂದು ಅಪಾರ್ಟ್ ಮೆಂಟ್ ನ್ನು ಮಾರಾಟ ಮಾಡಲು ರೂ.37,50,000/-ಗಳಿಗೆ ಒಪ್ಪಿಕೊಂಡು ಒಂದು ಅಗ್ರಿಮೆಂಟ್ ನ್ನು ಸಹ ಬರೆದುಕೊಟ್ಟಿರುತ್ತಾರೆ. ಸದರಿ ಅಗ್ರಿಮೆಂಟ್ ನ್ನು ಬರೆದು ಕೊಟ್ಟ ದಿನದಂದು ದೂರುದಾರರು 8 ಮತ್ತು 9 ಆರೋಪಿತರಿಗೆ ರೂ.8,50,000/- ಹಣವನ್ನು ಮುಂಗಡ ಹಣವನ್ನು ನೀಡಿರುತ್ತಾರೆ. ಅದೇ ರೀತಿ 8 ಮತ್ತು 9 ನೇ ಆರೋಪಿತರು ಐಸಿಐಸಿಐ ಬ್ಯಾಂಕಿನಿಂದ ಲೋನ್ ಮಾಡಿಸಲು ಸಮ್ಮತಿ ನೀಡಿರುತ್ತಾರೆ. ಆದರಂತೆ ದೂರುದಾರರು ಐಸಿಐಸಿಐ ಬ್ಯಾಂಕಿನಿಂದ ರೂ.30ಲಕ್ಷ ಹಣ ಸಾಲವನ್ನು

ಪಡೆದುಕೊಳ್ಳಲು ಅಪ್ರೂವಲ್ ಮಾಡಿಸಿಕೊಂಡಿರುತ್ತಾರೆ. ಅದರಲ್ಲಿ ರೂ.28,12,000/-ಗಳನ್ನು 7ನೇ ಆರೋಪಿರವರ ಖಾತೆಗೆ ವರ್ಗಾವಣೆಯಾಗಿರುತ್ತದೆ. ಇದಾದ ನಂತರ ದೂರುದಾರರು ಸದರಿ ಬಿಲ್ಡಿಂಗ್ ಕನ್ಸ್ ಸ್ಟಕ್ಷನ್ ನ್ನು ನೋಡಲು ವಾರದಲ್ಲಿ ಒಂದು ಬಾರಿ ಭೇಟಿ ಮಾಡುತ್ತಿದ್ದರು. 8 ಮತ್ತು 9 ನೇ ಆರೋಪಿತರು ನಾವು ನಿಮಗೆ ಎರಡು ವರ್ಷದ ಒಳಗೆ ಸಂಪೂರ್ಣ ಬಿಲ್ಡಿಂಗ್ ಕನ್‌ಸ್ಟಕ್ಷನ್ ಪೂರ್ಣಗೊಳಿಸಿ ನಿಮ್ಮ ವಶಕ್ಕೆ ನೀಡುತ್ತೇವೆ ಎಂದು ಹೇಳಿರುತ್ತಾರೆ. ಆರೋಪಿತರು ದಿ.16.09.2013ರಂದು ಕ್ರಯದ ಕರಾರು ಪತ್ರವನ್ನು ದೂರುದಾರರಿಗೆ ಬರೆದುಕೊಟ್ಟಿರುತ್ತಾರೆ. ಆರೋಪಿತರು ತಾವೂ ತೆಗೆದುಕೊಂಡ ಕಾಲಾವಧಿ ಹತ್ತಿರವಿದ್ದಂತೆ ದೂರುದಾರರು ಹೋಗಿ ವಿಚಾರಿಸುತ್ತಿದ್ದರು. ಆದರೆ 8 ಮತ್ತು 9ನೇ ಆರೋಪಿತರು ಸದರಿ ಕಾಲಾವಧಿಯಲ್ಲಿ ಕೆಲಸವನ್ನು ಪೂರ್ಣಗೊಳಿಸಲು ನಿರ್ಲಕ್ಷಿಸಿರುತ್ತಾರೆ. ದಿ.16.11.2016 ರಂದು 8 ಮತ್ತು 9ನೇ ಆರೋಪಿತರು ದೂರುದಾರರಿಗೆ ಬಿಲ್ಡಿಂಗ್ ವಹಿಸಿ ಕೊಡುವ ಬದಲು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಮಾರಾಟದ ಬಗ್ಗೆ ದೂರುದಾರರಿಗೆ ಯಾವುದೇ ಮಾಹಿತಿಯನ್ನು ಸಹ ನೀಡಿರುವುದಿಲ್ಲ.

2. ಇದಾದ ನಂತರ ದೂರುದಾರರು ಆರೋಪಿತರನ್ನು ವಿಚಾರಿಸಿದಾಗ ನಾವು ನಿಮಗೆ ಹಣವನ್ನು ವಾಪಸ್ ಕೊಡುತ್ತೇವೆ ಎಂದು ಆರು ತಿಂಗಳ ಕಾಲವಕಾಶವನ್ನು ತೆಗೆದುಕೊಂಡಿರುತ್ತಾರೆ. ಆದರೆ ಆರು ತಿಂಗಳ ನಂತರವೂ ಸಹ ಆರೋಪಿತರು ಹಣವನ್ನು ದೂರುದಾರರಿಗೆ ನೀಡಿರುವುದಿಲ್ಲ ಮತ್ತು ದೂರುದಾರರು ಫೋನ್ ಮಾಡಿದಾಗ ಆರೋಪಿತರು ಯಾವುದೇ ಪ್ರತಿಕ್ರಿಯೇಯನ್ನು ನೀಡಿರುವುದಿಲ್ಲ. ನಂತರ ದೂರುದಾರರ ಪರವಾಗಿ ನಾನು ಕೋರಮಂಗಲದ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಆದರೆ ಪೊಲೀಸರು ಯಾವುದೇ ಸೂಕ್ತ ಕಾನೂನು ಕ್ರಮವನ್ನು ಆರೋಪಿತರ ವಿರುದ್ದ ತೆಗೆದು ಕೊಂಡಿರುವುದಿಲ್ಲ. ನಂತರ ಸೆಂಟ್ರಲ್ ಕಮೀಷನರ್ ಕಛೇರಿಗೂ ಸಹ ಭೇಟಿ ನೀಡಿ ದೂರನ್ನು ನೀಡಿರುತ್ತೇನೆ. ಆದರೂ ಸಹ ಯಾವುದೇ ಸೂಕ್ತ ಕಾನೂನು ಕ್ರಮವನ್ನು ಆರೋಪಿತರ ವಿರುದ್ದ ತೆಗೆದುಕೊಂಡಿರುವುದಿಲ್ಲ. ದೂರುದಾರರು ದಿ.19.04.2024 ರಂದು ವಿಶೇಷ ಅಧಿಕಾರ ಪತ್ರವನ್ನು ನನಗೆ ಬರೆದುಕೊಟ್ಟಿರುತ್ತಾರೆ. ಈ ದೂರನ್ನು ನ್ಯಾಯಾಲಯದಲ್ಲಿ ದಾಖಲು

ಮಾಡುವಂತೆ ನನಗೆ ನಿರ್ದೇಶಿಸಿರುತ್ತಾರೆ. ಅದರಂತೆ ನಾನು ಈ ನ್ಯಾಯಾಲಯದಲ್ಲಿ ಆರೋಪಿತರ ವಿರುದ್ದ ಖಾಸಗಿ ದೂರನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿಯು ಸದರಿ ವಿಶೇಷ ಅಧಿಕಾರ ಪತ್ರದ ನೋಟರೈಜ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿಯು ಸದರಿ ಮೂಲ ವಿಶೇಷ ಅಧಿಕಾರ ಪತ್ರವನ್ನು ಸಿವಿಲ್ ದಾವೆಯಲ್ಲಿ ಹಾಜರುಪಡಿಸಬೇಕಾಗಿದೆ ಎಂದು ತಿಳಿಸಿದ್ದು, ಅದನ್ನು ಮೂಲ ವಿಶೇಷ ಅಧಿಕಾರ ಪತ್ರದ ಜೊತೆ ತಾಳೆ ಮಾಡಿ ನಂತರ ಸದರಿ ನೋಟರೈಜ್ಡ್ ಪ್ರತಿಯನ್ನು ನಿಪಿ.1 ಎಂದು, ಖಾಸಗಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಖಾಸಗಿ ದೂರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು, ಐಸಿಐಸಿಐ ಬ್ಯಾಂಕಿನವರು ನೀಡಿರುವ ಎಂಟು ಸ್ಟೇಟ್ ಮೆಂಟ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.3 ಎಂದು, ಸಾಕ್ಷಿಯು ದಿ.16.11.2016 ರ ನೊಂದಾಯಿತ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ನಿಪಿ.4 ಎಂದು, ಋಣಭಾರ ರಹಿತ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.5 ಎಂದು, ದಿ.23.10.2020 ರ ಲೀಗಲ್ ನೋಟಿಸ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.6 ಎಂದು, ಅಂಚೆ ರಸೀದಿಯನ್ನು ನಿಪಿ.7 ಎಂದು, ಅಂಚೆ ಟ್ರಾಕಿಂಗ್ ನ್ನು ನಿಪಿ.8 ಎಂದು ಗುರುತಿಸಲಾಯಿತು.

***ಮುಂದುವರೆದ ಸತ್ಯಪ್ರಮಾಣ ಹೇಳಿಕೆಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**